
UASB Library
Newspaper Clippings
Tuesday 15-03-2022 Pg .1
Jai Kisan

ಸಂಪಾದಕೀಯ

ಅಡುಗೆ ಎಣ್ಣೆ ಸಮಸ್ಯೆ ಬಗೆಹರಿಯಲಿ

ರಷ್ಯಾ-ಉಕ್ರೇನ್ ನಡುವಣದ ಯುದ್ಧ ಸದ್ಯ ಶಮನಗೊಳ್ಳುವ ಲಕ್ಷಣಗಳಿಲ್ಲ. ಕದನ ವಿರಾಮದ ದಿಶೆಯಲ್ಲಿ ಇದುವರೆಗೆ ನಾಲ್ಕು ಪ್ರಮುಖ ಸುತ್ತಿನ ಮಾತುಕತೆಗಳಾಗಿದ್ದರೂ ಇದ್ಯಾವುದೂ ಫಲಪ್ರದವಾಗಿಲ್ಲ. ಒಟ್ಟಿನಲ್ಲಿ ಈ ವಿದ್ಯಮಾನಗಳಿಂದ ಭಾರತ ಸೇರಿದಂತೆ ಪ್ರಪಂಚದ ಬಹುತೇಕ ದೇಶಗಳು ಎಲ್ಲ ರೀತಿಯಲ್ಲಿ ಸಮಸ್ಯೆ ಎದುರಿಸುವಂತಾಗಿದೆ.

ಭಾರತಕ್ಕೆ ಅಡುಗೆ ಎಣ್ಣೆ ಪ್ರಧಾನವಾಗಿ ಪೂರೈಕೆಯಾಗುವುದೇ ಉಕ್ರೇನ್‌ನಿಂದ. ಕಳೆದ 19 ದಿನಗಳಿಂದ ಉಭಯ ದೇಶಗಳಲ್ಲಿ ಸಮರ ತಲೆದೋರಿರುವ ಕಾರಣ ತೈಲೋತ್ಪನ್ನಗಳ ಪೂರೈಕೆಗೆ ಭಾರಿ ತೊಂದರೆಯಾಗಿದೆ. ಭಾರತೀಯ ತೈಲ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯ ಖರೀದಿ ಮತ್ತು ಮಾರಾಟದಲ್ಲಿ ಭಾರಿ ಅಂತರವುಂಟಾಗಿ ಬೆಲೆಯೂ ಗಗನನ್ನೇರಿರುವುದು ಗಮನಾರ್ಹ. ಇದು ಭಾರತೀಯ ಸಮಾಜದ ಎಲ್ಲ ವರ್ಗಗಳ ಮೇಲೂ ನೇರ ಪರಿಣಾಮ ಬೀರಿದ್ದು ಜೇಬಿಗೆ ಕತ್ತರಿ ಹಾಕಿದೆ. ಸೂರ್ಯಕಾಂತಿ ತೈಲದ ಬೆಲೆಯಂತೂ ಈಗ ದಿನಕ್ಕೊಂದು ದರ ಚಾಲ್ತಿಯಲ್ಲಿದೆ. ದೆಹಲಿ, ಮುಂಬೈ, ಬೆಂಗಳೂರಿನಂತಹ



ಮಹಾನಗರಗಳಿಗೆ ಅಡುಗೆ ಎಣ್ಣೆ ಸಮರ್ಪಕ ಪೂರೈಕೆಯಿಲ್ಲದೆ ಕಾಳಸಂತೆಕೋರರ ಕೈ ಚಳಕ ವಿಪರೀತವಾಗಿದೆ.

ಮಾರುಕಟ್ಟೆಗೆ ಪೂರೈಕೆಯಾದ ತೈಲವನ್ನೂ ಕೆಲ ಸ್ವಾರ್ಥ ವ್ಯಾಪಾರಿಗಳ ವ್ಯಾಪಾರಿಕ ನೀತಿಯಿಂದ ಮುಕ್ತ ಮಾರುಕಟ್ಟೆಯಲ್ಲಿ ನ್ಯಾಯಸಮ್ಮತ ಬೆಲೆಗೆ ಸಿಗದಂತಾಗಿದೆ! ಇದೇ ವೇಳೆ ಡೀಸಲ್ ಮತ್ತು ಪೆಟ್ರೋಲ್ ಪೂರೈಕೆ ಮೇಲೆ ಕೂಡಾ ಸಮರದ ಕರಾಳ ನೆರಳು ಆವರಿಸಿದೆ. ಕೊಲ್ಲಿ ದೇಶಗಳಿಂದ ಡೀಸಲ್ ಮತ್ತು ಪೆಟ್ರೋಲ್ ಭಾರತಕ್ಕೆ ಸದ್ಯ ಪೂರೈಕೆಯಾಗುತ್ತಿದ್ದರೂ, ಇಡೀ ಪ್ರಪಂಚಕ್ಕೆ ಅಧಿಕ ಪ್ರಮಾಣದಲ್ಲಿ ಇಂಧನವನ್ನು ಪೂರೈಸುವ ಈ ದೇಶಗಳ ಮೇಲೆ ಕೂಡಾ ಸಮರದ ಪ್ರಭಾವವಿದೆ. ರಷ್ಯಾ ಈಗಾಗಲೇ ಅಮೆರಿಕ ಮತ್ತು ನ್ಯಾಟೋ ದೇಶಗಳ ಮೇಲೆ ಕೆಲವೊಂದು ನಿರ್ಬಂಧಗಳನ್ನು ಹೇರಿದೆ. ಹಾಗೆಯೇ ಅಮೆರಿಕ ಮತ್ತು ಮಿತ್ರದೇಶಗಳೂ ರಷ್ಯಾ ಮೇಲೆ ವ್ಯಾಪಾರ ಮತ್ತು ವಾಣಿಜ್ಯವಲ್ಲದೆ ಸೇವಾ ವಲಯದ ಮೇಲೆ ನಿಷೇಧ ಹೇರಿದೆ. ಇವೆಲ್ಲ ವಿದ್ಯಮಾನಗಳನ್ನು ಅವಲೋಕಿಸಿದಾಗ ಸಮರ ಎಂಬುದು ಭಾರತ ಸೇರಿದಂತೆ ಪ್ರಪಂಚದ ಯಾವುದೇ ದೇಶಕ್ಕೆ ಇದೊಂದು ಶಾಪ ಎಂಬುದರಲ್ಲಿ ಎರಡು ಮಾತಿಲ್ಲ.

ಸೋಮವಾರದಂದು ದೇಶದ ಸಂಸತ್ತಿನಲ್ಲಿ ಬಜೆಟ್ ಮೇಲಿನ ಉತ್ತರಾರ್ಧ ಚರ್ಚೆ ಶುರುವಾಗಿದ್ದು ಈ ವೇಳೆ ದೇಶದಲ್ಲಿ ಉಂಟಾಗಿರುವ ತೈಲದ ಕೊರತೆ ಬಗ್ಗೆ ಪ್ರಸ್ತಾಪವಾಗಿದೆ. ಇದಕ್ಕೆ ಕೇಂದ್ರ ಸರ್ಕಾರ ಉತ್ತರವೂ ನೀಡಿದೆ. ಉಕ್ರೇನ್ ಹೊರತುಪಡಿಸಿ ಪ್ರಪಂಚದ ಬೇರೆ ದೇಶಗಳಿಂದಲೂ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುವ ಗಂಭೀರ ಚಿಂತನೆ ಆಗಬೇಕಿದೆ, ಇದೇ ವೇಳೆ ಸೂರ್ಯಕಾಂತಿ ಎಣ್ಣೆಗೆ ಪರ್ಯಾಯವಾಗಿ ಅಡುಗೆಗೆ ಬಳಸುವ ಶೇಂಗಾ ಎಣ್ಣೆಯನ್ನೂ ದೇಶದ ಜನತೆಗೆ ಕೈಗೆಟಕುವ ಧರದಲ್ಲಿ ಪೂರೈಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಳಜಿ ವಹಿಸಬೇಕಿದೆ. ಕರ್ನಾಟಕ, ತಮಿಳುನಾಡು, ತೆಲಂಗಾಣ ಅಲ್ಲದೆ ಮಹಾರಾಷ್ಟ್ರಮೊದಲಾದಕಡೆಹೆಚ್ಚಾಗಿಶೇಂಗಾಎಣ್ಣೆವ್ಯಾಪಕಪ್ರಮಾಣದಲ್ಲಿ ಬಳಕೆಯಾಗುತ್ತೆ. ಇನ್ನು ಉತ್ತರ ಭಾರತದಲ್ಲಿ ಸಾಸಿವೆ ಎಣ್ಣೆ ಹೆಚ್ಚು ಬಳಕೆಯಲ್ಲಿದೆ. ಸಾಲು, ಸಾಲಿನ ಹಬ್ಬಗಳು ಬೇರೆ ಈಗ ಶುರುವಾಗಲಿದೆ. ಈ ದಿಶೆಯಲ್ಲಿ ಸರ್ಕಾರ ದೇಶದ ಜನತೆಗೆ ತುಟ್ಟಿಯಾಗುತ್ತಿರುವ ಅಡುಗೆ ಎಣ್ಣೆ ಪೂರೈಕೆ ವಿಚಾರದಲ್ಲಿ ಎಚ್ಚರ ತಪ್ಪದಿರಲಿ.

'ರಾಗಿ ಖರೀದಿ ಹೆಚ್ಚಳಕ್ಕೆ ಚಿಂತನೆ'



ಹಾಸನ: 'ರಾಗಿ ಖರೀದಿ ಪ್ರಮಾಣ ಹೆಚ್ಚಿಸಬೇಕೆಂಬ ರೈತರ ಬೇಡಿಕೆ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಖರೀದಿ ಕೇಂದ್ರ ಆರಂಭಿಸುವ ಬಗ್ಗೆ ರಾಜ್ಯ ಸರ್ಕಾರದ ಜತೆ ಚರ್ಚಿಸಲಾಗುವುದು' ಎಂದು ಕೇಂದ್ರ ಕೃಷಿ, ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಕಾರೆಕೆರೆ ಕೃಷಿ ಕಾಲೇಜಿನ ಕ್ರೀಡಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಕರ್ನಾಟಕ ರೈತ ಸುರಕ್ಷತಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ 'ನನ್ನ ಪಾಲಿಸಿ ನನ್ನ ಕೈಯಲ್ಲಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 'ವಿಶ್ವಸಂಸ್ಥೆ ಸಹಯೋಗದಲ್ಲಿ ರಾಗಿ, ಸಿರಿಧಾನ್ಯಗಳಿಗೆ ಅಂತರರಾಷ್ಟ್ರೀಯವಾಗಿ ಮಾರುಕಟ್ಟೆ ಸೃಷ್ಟಿಸಲು ಒತ್ತು ನೀಡಲಾಗುವುದು. 2023ರೊಳಗೆ ಎಲ್ಲ ರಾಯಭಾರಿ ಕಚೇರಿಗಳಲ್ಲಿ ರಾಗಿ, ಜೋಳ, ಸಿರಿಧಾನ್ಯ ಪ್ರದರ್ಶನ ಮಾಡಲಾಗುವುದು' ಎಂದು ಹೇಳಿದರು.

'ರೈತರಿಗೆ ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಎರಡೂ ವಿಷಯಗಳ ಬಗ್ಗೆ ಮಾಹಿತಿ ನೀಡುವ ವ್ಯವಸ್ಥೆ ಮಾಡಬೇಕು' ಎಂದೂ ಸಲಹೆ ನೀಡಿದರು.

15-03-2022
Pv Pg 05

15-03-2022
Hd Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in